ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಚುನಾವಣೆ - ವಿಧಾನಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE 20/6/2020

ಮೇಲ್ಮನೆ ಅಭ್ಯರ್ಥಿಗಳ ಆಸ್ತಿ ವಿವರ । ಶಂಕರ್ ಆಸ್ತಿ ಏರಿಕೆ । ಜೆಡಿಎಸ್ ಅಭ್ಯರ್ಥಿಯೂ ಸ್ಥಿತಿವಂತ

# ನಾಯಕ್ 3, ಎಂಟಿಬಿ ಸಾವಿರ ಕೋಟಿ ವೀರ

■ **ವಿಕ ಸುದ್ದಿಲೋಕ** ಬೆಂಗಳೂರು

ಮೇಲ್ಮನೆ ಚುನಾವಣೆಗೆ ಅಭ್ಯರ್ಥಿಗಳಾಗಿರುವ ಮೂರು ಪಕ್ಷಗಳ 7 ಮಂದಿ ಕೋಟ್ಯಾಧೀಶರು. ನಾಮಪತ್ರದೊಂದಿಗೆ ಅಭ್ಯರ್ಥಿಗಳು ಆಸ್ತಿ ವಿವರ ಸಲ್ಲಿಸಿದ್ದು, ಎಲ್ಲರಿಗಿಂತ ಮಾಜಿ ಸಚಿವ ಎಂಟಿಬಿ ನಾಗರಾಜ್ ಹೆಚ್ಚು ಸಿರಿವಂತರಾಗಿದ್ದಾರೆ. ಅವರೇ ಘೋಷಿಸಿಕೊಂಡಿರುವಂತೆ ಒಟ್ಟು 1224 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಹೊಂದಿದ್ದಾರೆ. ಬಿಜೆಪಿಯ ಪ್ರತಾಪ ಸಿಂಹ ನಾಯಕ್ ಅತ್ಯಂತ ಕಡಿಮೆ ಆಸ್ತಿ ಹೊಂದಿರುವ ಅಭ್ಯರ್ಥಿಯಾಗಿದ್ದಾರೆ.

ಕಳೆದ ವಿಧಾನಸಭೆ ಉಪಚುನಾವಣೆಯಿಂದ ಈವರೆಗೆ ಎಂಟಿಬಿ ಸಂಪತ್ತು 24 ಕೋಟಿ ರೂ. ಹೆಚ್ಚಳವಾಗಿದೆ. 2018ರ ವಿಧಾನಸಭೆ ಚುನಾವಣೆ ನಂತರದ ಸುಮಾರು 2 ವರ್ಷಗಳ ಅವಧಿಯಲ್ಲಿ ಶಂಕರ್ ಸಂಪತ್ತು ಸುಮಾರು 36 ಕೋಟಿ ರೂ.ಗಳಷ್ಟು ಹೆಚ್ಚಳವಾಗಿದೆ.

**ಜೆಡಿಎಸ್ ಅಭ್ಯರ್ಥಿಯೂ ಸ್ಥಿತಿವಂತ**

ಜೆಡಿಎಸ್‌ನಿಂದ ಸಾಮಾನ್ಯ ಕಾರ್ಯಕರ್ತನಾಗಿ ಟಿಕೆಟ್ ಗಿಟ್ಟಿಸಿ ಅಭ್ಯರ್ಥಿ ಆಗಿರುವ ಗೋವಿಂದರಾಜು ಅವರೂ 80 ಕೋಟಿ ರೂ. ಆಸ್ತಿ ಹೊಂದಿರುವ ಸ್ಥಿತಿವಂತರು. ಗೋವಿಂದರಾಜು ತಮ್ಮ ಮತ್ತು ಪತ್ನಿ ಹೆಸರಿನಲ್ಲಿ 14.17 ಕೋಟಿ ರೂ. ಮೌಲ್ಯದ ಚರಾಸ್ತಿ ಮತ್ತು 29 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿ ಘೋಷಿಸಿದ್ದಾರೆ. ತಮ್ಮ ಅವಿಭಕ್ತ ಕುಟುಂಬ 13.34 ಕೋಟಿ ಮೌಲ್ಯದ ಚರಾಸ್ತಿ ಮತ್ತು 23.11 ಕೋಟಿ ಸ್ಥಿರಾಸ್ತಿ ಹೊಂದಿದೆ ಎಂದು ಅವರು ವಿವರ ನೀಡಿದ್ದಾರೆ.

41 ಲಕ್ಷ ರೂ. ನಗದು ಗೋವಿಂದರಾಜು ಬಳಿ ಇದ್ದು ನಾನಾ ವ್ಯಕ್ತಿ, ಸಂಸ್ಥೆಗಳಿಗೆ 11.32 ಕೋಟಿ ಸಾಲ ನೀಡಿದ್ದಾರೆ.

**36 ಕೋಟಿ ಒಡೆಯ ನಜೀರ್**

ಕಾಂಗ್ರೆಸ್‌ನ ನಜೀರ್ ಅಹ್ಮದ್ ಅವರು ಒಟ್ಟು 36 ಕೋಟಿ ರೂ. ಆಸ್ತಿ ಘೋಷಣೆ ಮಾಡಿಕೊಂಡಿದ್ದಾರೆ. 7.39 ರೂ. ಮೌಲ್ಯದ ಚರಾಸ್ತಿ ಹಾಗೂ 17.75 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿ ಘೋಷಿಸಿರುವ ನಜೀರ್ ಅವರು 7.06 ಕೋಟಿ ರೂ. ಸಾಲ ನೀಡಿದ್ದಾರೆ.

## ಎಂಟಿಬಿ 1224 ಕೋಟಿ ಒಡೆಯ



ಬಿಜೆಪಿ ಅಭ್ಯರ್ಥಿ ಎಂಟಿಬಿ ನಾಗರಾಜ್ 1224 ಕೋಟಿ ರೂ. ಮೌಲ್ಯದ ಆಸ್ತಿ ಘೋಷಿಸಿದ್ದಾರೆ. ಒಟ್ಟು 2.23 ಕೋಟಿ ರೂ. ಮೌಲ್ಯದ ಡೈಮಂಡ್, ಪ್ಲಾಟಿನಂ ಮತ್ತು ಚಿನ್ನಾಭರಣ ಎಂಟಿಬಿ ಬಳಿ ಇವೆ. ಪತ್ನಿ ಬಳಿಯೂ 1.48 ಕೋಟಿ ರೂ. ಮೌಲ್ಯದ ಆಭರಣಗಳಿವೆ. ಲ್ಯಾಂಡ್ ರೋವರ್, ಮರ್ಸಿಡಿಸ್ ಬೆನ್ಜ್‌ನಂತಹ ಕಾರುಗಳಿಗೂ ಎಂಟಿಬಿ ಒಡೆಯ. ಸ್ವಂತ ಹೆಸರಿನಲ್ಲಿ 884 ಕೋಟಿ ಚರಾಸ್ತಿ ಮತ್ತು ಸ್ಥಿರಾಸ್ತಿ ಹೊಂದಿದ್ದು, ಅವರ ಪತ್ನಿ ಶಾಂತಾಕುಮಾರಿ ಹೆಸರಿನಲ್ಲಿ 331 ಕೋಟಿ ಮೌಲ್ಯದ ಆಸ್ತಿಗಳಿವೆ. ಸ್ವಂತ ಹೆಸರಿನಲ್ಲಿ 52.75 ಕೋಟಿ ರೂ. ಸಾಲ ಮತ್ತು ಪತ್ನಿ ಹೆಸರಿನಲ್ಲಿ 1.97 ಕೋಟಿ ಸಾಲವಿದೆ.

## ಅತಿ ಕಡಿಮೆ ಆಸ್ತಿವಂತ

ಬಿಜೆಪಿಯ ಪ್ರತಾಪ ಸಿಂಹ ನಾಯಕ್ ಅತ್ಯಂತ ಕಡಿಮೆ ಆಸ್ತಿ ಹೊಂದಿದ ಅಭ್ಯರ್ಥಿಯಾಗಿದ್ದಾರೆ.



ಒಟ್ಟು 2.29 ಕೋಟಿ ರೂ. ಆಸ್ತಿ ಹೊಂದಿದ್ದು ಅದರಲ್ಲಿ 45.53 ಲಕ್ಷ ಚರಾಸ್ತಿ, 1.31 ಕೋಟಿ ಮೌಲ್ಯದ ಸ್ಥಿರಾಸ್ತಿ ಹೊಂದಿದ್ದಾರೆ. ಪತ್ನಿ ಜ್ಯೋತಿ ನಾಯಕ್ ಹೆಸರಲ್ಲಿ 52.36 ಲಕ್ಷ ರೂ. ಚರಾಸ್ತಿ ಇದೆ. ಪುತ್ರಿ ಹೆಸರಲ್ಲಿ ಯಾವುದೇ ಆಸ್ತಿ ಇಲ್ಲವೆಂದು ಘೋಷಿಸಿದ್ದಾರೆ.

## ಹರಿಪ್ರಸಾದ್ ವಾಣಿಜ್ಯ ಕಟ್ಟಡದ ಒಡೆಯ

ಕಾಂಗ್ರೆಸ್ ಅಭ್ಯರ್ಥಿ ಬಿ.ಕೆ.ಹರಿಪ್ರಸಾದ್ 14.62 ಕೋಟಿ ರೂ. ಮೌಲ್ಯದ ಸ್ಥಿರಾಸ್ತಿ ಹೊಂದಿದ್ದು, 64 ಲಕ್ಷ ಮೌಲ್ಯದ ಚರಾಸ್ತಿ, ಬೆಂಗಳೂರಿನ ಆರ್.ಟಿ. ನಗರದಲ್ಲಿ 10.50 ಕೋಟಿ ಮೌಲ್ಯದ ವಾಣಿಜ್ಯ ಕಟ್ಟಡ ಹೊಂದಿದ್ದಾರೆ. ಹರಿಪ್ರಸಾದ್ ಅವರ ಪತ್ನಿ ಬೆಂಗಳೂರಿನ ಆರ್‌ಎಂವಿ ಬಡಾವಣೆಯಲ್ಲಿ 3750 ಚದರಡಿ ವಿಸ್ತೀರ್ಣದಲ್ಲಿ 4.12 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ವಸತಿ ಕಟ್ಟಡದಲ್ಲಿ ಶೇ. 50ರಷ್ಟು ಪಾಲುದಾರರು.

## ವಲ್ಯಾಪುರೆ 20 ಕೋಟಿ ರೂ. ಒಡೆಯ

ಸುನೀಲ್ ವಲ್ಯಾಪುರೆ ಅವರು 20.02 ಕೋಟಿ ರೂ. ಮೌಲ್ಯದ ಆಸ್ತಿ ಘೋಷಿಸಿಕೊಂಡಿದ್ದಾರೆ. ಸ್ವಂತ ಹೆಸರಿನಲ್ಲಿ 18.03 ಕೋಟಿ ಹಾಗೂ ಪತ್ನಿ ಹೆಸರಿನಲ್ಲಿ 1.98 ಕೋಟಿ ಮೌಲ್ಯದ ಚರಾಸ್ತಿ ಮತ್ತು ಸ್ಥಿರಾಸ್ತಿ ಇವೆ ಎಂದು ಅಫಿಡವಿಟ್‌ನಲ್ಲಿ ವಿವರ ನೀಡಿದ್ದಾರೆ.

## ಶಂಕರ್ ಬಳಿ 301 ಕೋಟಿ

ಬಿಜೆಪಿಯ ಅಭ್ಯರ್ಥಿ ಶಂಕರ್ 301.38 ಕೋಟಿ ಆಸ್ತಿ ಹೊಂದಿದ್ದಾರೆ. 2018ರ ಚುನಾವಣೆಯಲ್ಲಿ 265 ಕೋಟಿ ಆಸ್ತಿ ಘೋಷಣೆ ಮಾಡಿಕೊಂಡಿದ್ದರು. ಶಂಕರ್ ಹೆಸರಿನಲ್ಲಿ 195 ಕೋಟಿ ಹಾಗೂ ಪತ್ನಿ ಧನಲಕ್ಷ್ಮಿ ಹೆಸರಿನಲ್ಲಿ 106 ಕೋಟಿ ಮೌಲ್ಯದ ಆಸ್ತಿ ಇದೆ. ಜತೆಗೆ, ತಮ್ಮ ಹೆಸರಿನಲ್ಲಿ 44.63 ಕೋಟಿ ರೂ. ಹಾಗೂ ಪತ್ನಿ ಹೆಸರಿನಲ್ಲಿ 21.33 ಕೋಟಿ ಸಾಲವಿದೆ ಎಂದು ಅಫಿಡವಿಟ್‌ನಲ್ಲಿ ನಮೂದಿಸಿದ್ದಾರೆ.

## ಏಳೂ ಅಭ್ಯರ್ಥಿಗಳ ನಾಮಪತ್ರ ಸಿಂಧು, ಅವಿರೋಧ ಆಯ್ಕೆ ಘೋಷಣೆ ಬಾಕಿ

**ಬೆಂಗಳೂರು:** ವಿಧಾನ ಪರಿಷತ್ ಚುನಾವಣೆಗೆ ಬಿಜೆಪಿಯ ಸುನೀಲ್ ವಲ್ಯಾಪುರೆ, ಪ್ರತಾಪ್ ಸಿಂಹ ನಾಯಕ್, ಎಂ.ಟಿ.ಬಿ.ನಾಗರಾಜ್, ಆರ್.ಶಂಕರ್, ಕಾಂಗ್ರೆಸ್‌ನ ಬಿ.ಕೆ.ಹರಿಪ್ರಸಾದ್, ನಜೀರ್ ಅಹ್ಮದ್, ಜೆಡಿಎಸ್‌ನ ಗೋವಿಂದರಾಜು ಸಲ್ಲಿಸಿರುವ ನಾಮಪತ್ರ ಸಿಂಧುವಾಗಿವೆ. ವಿಧಾನಸಭೆಯಿಂದ ವಿಧಾನ ಪರಿಷತ್‌ನ 7 ಸ್ಥಾನಗಳಿಗೆ ಚುನಾವಣೆ ಘೋಷಣೆಯಾಗಿದೆ. 7 ಅಭ್ಯರ್ಥಿಗಳು ಮಾತ್ರ ಕಣದಲ್ಲಿ ಉಳಿಯುವುದರಿಂದ ಅವಿರೋಧ ಆಯ್ಕೆಯಾಗಲಿದೆ. ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಈ ಅಭ್ಯರ್ಥಿಗಳ ಹೊರತಾಗಿ ಇಬ್ಬರು ನಾಮಪತ್ರ ಸಲ್ಲಿಸಿದ್ದರು. ಅವರ ನಾಮಪತ್ರಕ್ಕೆ ಸೂಚಕರು ಇರಲಿಲ್ಲ, ಹಾಗಾಗಿ ಇವರ ನಾಮಪತ್ರಗಳು ಸಹಜವಾಗಿ ತಿರಸ್ಕೃತಗೊಂಡಿವೆ. ನಾಮಪತ್ರಗಳನ್ನು ವಾಪಸ್ ಪಡೆಯಲು ಸೋಮವಾರ (ಜೂ.22) ಕಡೆಯ ದಿನವಾಗಿದೆ. ಅಂದೇ ಎಲ್ಲಾ ಅಭ್ಯರ್ಥಿಗಳಿಗೆ ಆಯ್ಕೆ ಪತ್ರ ನೀಡುವ ಸಾಧ್ಯತೆಗಳಿವೆ. ಜೂನ್ 29ಕ್ಕೆ ಚುನಾವಣೆ ನಿಗದಿಯಾಗಿದ್ದರೂ ಖಾಲಿಯಾಗಲಿರುವ ಸ್ಥಾನಗಳ ಸಂಖ್ಯೆಯಷ್ಟೇ ಅಭ್ಯರ್ಥಿಗಳು ಕಣದಲ್ಲಿ ಇರುವುದರಿಂದ ಎಲ್ಲಾ 7 ಅಭ್ಯರ್ಥಿಗಳ ಅವಿರೋಧ ಆಯ್ಕೆ ಖಚಿತವಾಗಿದೆ. ಆದರೆ ಅಧಿಕೃತ ಘೋಷಣೆಯಷ್ಟೇ ಆಗಬೇಕಿದೆ.